

ಊರನ್ನೇ ಆಪೋಶನ ತೆಗೆದುಕೊಂಡ ಭೂಕುಸಿತದಲ್ಲಿ ಬದುಕುಳಿದವರಿಗಾಗಿ ನಡೆದಿರುವ ರಕ್ಷಣಾ ಕಾರ್ಯಾಚರಣೆ

ಮಾಡಿಕೊಳ್ಳಬೇಕು. ಆಕಾರವಿಲ್ಲದ ಮುಖಗಳನ್ನು ನೋಡುತ್ತ, ಕುಸಿದು ಹೋಗುತ್ತಿರುವ ಮನಸ್ಸನ್ನು ಗಟ್ಟಿ ಮಾಡಿಕೊಳ್ಳುತ್ತ ಏಕಾಂಗಿಯಾಗಿ ಅವರು ಅಲೆಯುತ್ತಿದ್ದಾರೆ.


ಅವರು ಏಕಾಂಗಿ ಎಂದು ಹೇಳುವುದೂ ತಪ್ಪಾಗುತ್ತದೆ. ಪರಿಹಾರ ಕ್ಯಾಂಪ್‌ಗಳಲ್ಲಿರುವ ಎಲ್ಲರೂ ಏಕಾಂಗಿ ಭಾವದಲ್ಲಿ ಒಂದು ಜಾಗಕ್ಕೆ ಬಂದು ಸೇರಿದವರು. ಚೂರಲ್‌ಮಲ ನಗರದ ಕಾರ್ಪೊರೇಟರ್ ಸಿ.ಕೆ. ನೂರುದ್ದೀನ್ ಈ ಹಿಂದೆ ಪೂತುಮಲ ಬೆಟ್ಟ ಕುಸಿತಕ್ಕೆ ಸಾಕ್ಷಿಯಾದವರು. ಈಗ ಪಕ್ಕದಲ್ಲೇ ಇರುವ ಮತ್ತೊಂದು ಭೂಕುಸಿತವನ್ನು ಅವರು ಕಣ್ಣಾರೆ ಕಾಣಬೇಕಾಯಿತು.

“2019ರಲ್ಲಿ ಪೂತುಮಲ ಬೆಟ್ಟ ಕುಸಿದಾಗ ನನ್ನ ಬಂಧುಗಳನೇಕರನ್ನು ಕಳೆದುಕೊಳ್ಳಬೇಕಾಯಿತು. ಆಗ ಇದೇ ಇರುವಂಚಿಪುಳ ನದಿಯು ಸಿಟ್ಟಿನಿಂದ ಉಕ್ಕಿ ಹರಿದಿತ್ತು. ಇರುವಂಚಿಪುಳವೆಂದರೆ ಎರಡು ದೋಣಿಗಳ ನದಿಯೆಂದು ಅರ್ಥ. ಆ ತೀರದಿಂದ ಈ ತೀರಕ್ಕೆ, ಈ ತೀರದಿಂದ ಆ ತೀರಕ್ಕೆ ದೋಣಿಯಲ್ಲಿ ಸಾಗಬಹುದಾದ ಪ್ರಶಾಂತ ನದಿಯಿದು, ಇರುವಂಚಿಪುಳ. ಈ ಬೆಟ್ಟವೂ ಅಷ್ಟೆ. ‘ಒಟಕ್ಕತಲ ಮೇಡು’ ಎಂದು ಇದನ್ನು ಹಿರಿಯರು ಕರೆಯುತ್ತಿದ್ದರು. ಅಂದರೆ ಒಂಟೆಯ ಡುಬ್ಬದಂತೆ ಇರುವ ಬೆಟ್ಟವೂ ಹೌದು. ವಯನಾಡಿನ ಕೃಷಿ ಭೂಮಿಯನ್ನು ಫಲವತ್ತಾಗಿ ಇರಿಸಬಲ್ಲ

## ಅಪಾಯದ ಗಂಟೆ ಬಾರಿಸಿತ್ತು

ಹಟ್ಟಿಯಲ್ಲಿ ಎಂಟು ದನಗಳಿದ್ದವು. ಅವುಗಳು ಮಧ್ಯರಾತ್ರಿ ಭಯದಿಂದ ಕೂಗಲಾರಂಭಿಸಿದವು. ಅವುಗಳ ಅಸ್ವಸ್ಥ ಸ್ಥಿತಿಯನ್ನು ನೋಡಿ ನಾನು ಏನೋ ಸಮಸ್ಯೆಯಾಗುತ್ತಿದೆ ಎಂದು ಅಂದಾಜು ಮಾಡಿಕೊಂಡಿದ್ದೆ. ಏನೋ ಸ್ಫೋಟವಾದ ಸದ್ದು ಕೇಳಿಸುತ್ತಲೇ ಅದು ಅಪಾಯದ ಗಂಟೆಯೆಂದು ನನಗೆ ಅರಿವಾಯಿತು. ಹಟ್ಟಿಯಲ್ಲಿದ್ದ ಎಂಟು ದನಗಳ ಕುಣಿಕೆ ಬಿಚ್ಚಿ ಅವುಗಳನ್ನು ಅಲ್ಲಿಂದ ಸುರಕ್ಷಿತ ಜಾಗಕ್ಕೆ ಅಟ್ಟಿದೆ. ಇತ್ತ ಮನೆಯೊಳಗೆ ಮಲಗಿದ್ದವರನ್ನೂ ಎಬ್ಬಿಸಿ, ಸುರಕ್ಷಿತ ಜಾಗಕ್ಕೆ ಓಡಿಹೋದೆವು. ಮನೆಯೊಳಗೆ ಇದ್ದ ಅತಿಥಿಗಳನ್ನೂ ಕರೆದುಕೊಂಡು ಓಡಿಹೋಗುತ್ತಿದ್ದಂತೆಯೇ, ಬೆಟ್ಟ ಕುಸಿದು ಬೀಳುವ ಸದ್ದನ್ನು, ವಾಹನಗಳು ಹೆಡ್ ಲೈಟ್ ಹೊತ್ತಿದ್ದ ಹಾಗೆಯೇ ಕೊಚ್ಚಿಹೋಗುತ್ತಿರುವ ದೃಶ್ಯವನ್ನು ಕಂಡೆ.

—ರಾಜೇಶ್, ಚೂರಲ್‌ಮಲ ನಿವಾಸಿ



ಭೂಕುಸಿತದಲ್ಲಿ ಕೊಚ್ಚಿ ಹೋಗಿರುವ, ತಮ್ಮ ಮನೆ ಇದ್ದ ಜಾಗವನ್ನು ತೋರುತ್ತಿರುವ ರಾಜೇಶ್
ಚಿತ್ರ: ಪುಷ್ಕರ್ ವಿ.